# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Sitac Management & Development Private Limited ರವರಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಗದಗ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಯಾಗಿರುವ 50 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹೆಸರನ್ನು M/s EDF Renewables India Private Limited ಎಂದು ಬದಲಾಯಿಸಿ, ಸದರಿ ಸಾಮರ್ಥ್ಯವನ್ನು M/s Halvad Renewables Private Limited ರವರಿಗೆ ವರ್ಗಾಯಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 193 ಎನ್‌ಸಿಇ 2020, ದಿನಾಂಕ: 29.07.2021

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/HRPL-50 MW(SM&DPL-EDFRPL)/Gadag&Koppal/F-1961/2021/3233, ದಿನಾಂಕ:20.11.2021

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದನ್ವಯ M/s Sitac Management & Development Private Limited ರವರಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಗದಗ ಮತ್ತು ಯಲಬುರ್ಗಾ ತಾಲ್ಲೂಕುಗಳ ನಾರಾಯಣಪುರ, ಕೋಟ್ ಉಮಚಗಿ ಮತ್ತು ಜಾಂಪುರ್ ಗ್ರಾಮಗಳಲ್ಲಿ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ISTS ವರ್ಗದಡಿಯಲ್ಲಿ ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು M/s Sitac Management & Development Private Limited ರವರು ತಮ್ಮ ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಗದಗ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕಂಪನಿಯ ಹೆಸರನ್ನು M/s EDF Renewables India Private Limited ಎಂದು ಬದಲಾಯಿಸಬೇಕೆಂದು ಕೋರಿ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಿರುವುದಾಗಿ ತಿಳಿಸುತ್ತಾ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಎರಡೂ ಕಂಪನಿಗಳ CIN No.U40106GJ2015PTC084905 ಒಂದೇ ಆಗಿರುವುದಾಗಿ, ನಿಗದಿತ ಶುಲ್ಕ ಪಾವತಿಸಿಕೊಂಡು ಅಭಿವೃದ್ಧಿದಾರರ ಕೋರಿಕೆಯಂತೆ ಕಂಪನಿಯ ಹೆಸರನ್ನು M/s EDF Renewables India Private Limited ಎಂದು ಬದಲಾಯಿಸುವುದು ಹಾಗೂ ಹೆಸರು ಬದಲಾವಣೆಯ ನಂತರ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೂಲ ಷರತ್ತಿನಂತೆಯೇ, ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ಸರಬರಾಜು ಮಾಡುವ ಷರತ್ತಿನೊಂದಿಗೆ M/s Halvad Renewables Private Limited ರವರಿಗೆ ವರ್ಗಾಯಿಸುವ ಸಂಬಂಧ ನಿಯಮಾನುಸಾರ ಪರಿಶೀಲಿಸಿ, ನಿಗದಿತ ಶುಲ್ಕ ಪಾವತಿಸಿಕೊಂಡು, ಯೋಜನೆಯ ತಾಂತ್ರಿಕ ಮಾಹಿತಿಯೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದು, M/s Halvad Renewables Private Limited ರವರಿಗೆ ಯೋಜನೆಗೆ ಸಂಬಂಧಿಸಿದಂತೆ ಟೋಪೋಶೀಟ್ ಸಂಖ್ಯೆ:48/M/14 ರಲ್ಲಿ ನೀಡಿರುವ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಳದಲ್ಲಿ ಸದರಿಯವರು 25 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು ಅಳವಡಿಸುವ ಮತ್ತು ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ 100 ಎಕರೆ (25 Nos of WTG X 4 Acre = 100 Acre) ಖಾಸಗಿ ಜಮೀನನ್ನು ಮಾತ್ರ ಉಪಯೋಗಿಸಿಕೊಳ್ಳಬೇಕಾಗುತ್ತದೆಂದು ತಿಳಿಸುತ್ತಾ, ಸದರಿಯವರು ಅಳವಡಿಸುವ ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ (Micrositing guidelines) ಅಳವಡಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

....2

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 306 ಎನ್‌ಸಿಇ 2021**

**ಬೆಂಗಳೂರು, ದಿನಾಂಕ:04.12.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Sitac Management & Development Private Limited ರವರಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಗದಗ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕಂಪನಿಯ ಹೆಸರನ್ನು M/s EDF Renewables India Private Limited ಎಂದು ಬದಲಾಯಿಸಿ, ಸದರಿ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Halvad Renewables Private Limited ರವರಿಗೆ ಈ ಕೆಳಕಂಡ ಷೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ವರ್ಗಾಯಿಸಿ ಆದೇಶಿಸಿದೆ.

**Geographical area description for 50 MW capacity wind power project of M/s Halvad Renewables Private Limited**

| Sl. No | Topo Sheet No | Proposed capacity in MW | Near by Villages of the proposed area and district | Geographical area description of the project |
|---|---|---|---|---|
| 1 | 48 M/ 14 | 50 MW (25 Nos X 2000 kW) | Narayanapur, Kot Umachagi and Jampur villages of Gadag and Yelburga taluks, Gadag and Koppal Districts. | The proposed area is in plain land and road crossing between Gadag and Naregal. The area is surrounded by the points A, B, C, D, E, F, G, H, I, J, K and are held in the following Geographical co-ordinates as:<br>**Point A**: Latitude: 15°30'0"N, Longitude: 75°45'0"E<br>**Point B**: Latitude: 15°32'13.27"N, Longitude: 75°45'0"E<br>**Point C**: Latitude: 15°32'11.04"N, Longitude: 75°47'27.81"E<br>**Point D**: Latitude: 15°30'56.37"N, Longitude: 75°47'28.48"E<br>**Point E**: Latitude: 15°30'53.64"N, Longitude: 75°50'5.64"E<br>**Point F**: Latitude: 15°30'25.27"N, Longitude: 75°51'13.21"E<br>**Point G**: Latitude: 15°33'32.76"N, Longitude: 75°51'33.40"E<br>**Point H**: Latitude: 15°33'42.73"N, Longitude: 75°50'3.55"E<br>**Point I**: Latitude: 15°35'0"N, Longitude: 75°50'3.08"E<br>**Point J**: Latitude: 15°35'0"N, Longitude: 75°51'38.16"E<br>**Point K**: Latitude: 15°30'0"N, Longitude: 75°51'42.12"E<br><br>**Peaks:** 640, 628,663,642, 626, 633, 635, 621 & 643m AMSL |
| | **Total** | **50 MW** | | |

**ಷರತ್ತುಗಳು**

1. M/s Halvad Renewables Private Limited ಕಂಪನಿಯು ಸರ್ಕಾರಿ ಆದೇಶ ಸಂಖ್ಯೆ:ಇಎನ್ 435 ಎನ್.ಸಿ.ಇ 2011, ದಿನಾಂಕ:06.01.2012ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಪೂರಕ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.